ಹೆಂಡತಿಯಿಂದ ಛೀಮಾರಿಯೂ ಆಯಿತು! ಆಕೆಯಂತೂ ನನ್ನ ಮತ್ತು ಮಧುಕರಿಯ ಜಾತಕವನ್ನೇ ಜಾಲಾಡಿ ಬದಿಗಿಟ್ಟಿದ್ದಳು. 'ಅಪ್ಪಅಮ್ಮ ಹೇಗೋ ಸಂತಾನವೂ ಹಾಗೇ! ನೂಲಿನಂತೆ ಸೀರೆ ಅನ್ನೋ ಗಾದೆಯೇ ಇದೆಯಲ್ಲ...' ಅಂದಿದ್ದಳು! ಸರಿ... ಅಲ್ಲಿಂದ ಇವಳನ್ನು ಕಳಚಿಸಿ, ಕೂಡಲೆ ಮದುವೆ ಮಾಡುವುದೇ ದಾರಿಯೆಂದುಕೊಂಡು ಮನೆಯಲ್ಲಿರಿಸಿಕೊಂಡರೆ, ಇದ್ದಕ್ಕಿದ್ದಂತೆ ಅಲೇಕ್ಷ್ಯನ ಮೋಹದಲ್ಲಿ ಸಿಲುಕುವುದೆ? ಅಚಾತುರ್ಯ ತಾನೇ?! ಹೇಳಿಕೊಂಡರೆ ಆಡಿಕೊಂಡು ನಕ್ಕಾರು, ಅಷ್ಟೆ!!

ಅದೃಷ್ಟದ ಸಂಗತಿಯೆಂದರೆ ಅಲೇಕ್ಷ್ಯನೊಡನೆ, ನನ್ನ ಮಗಳು, ಮೈಸಲಿಗೆ ಬೆಳೆಸಿಕೊಳ್ಳಲಿಲ್ಲವೆಂಬುದಷ್ಟೇ! ಇದು, ಇವೊತ್ತಿಗೂ ನನ್ನ ಮಟ್ಟಿಗಿನ ಸಮಾಧಾನದ ವಿಷಯವೇ ಸರಿ. ಅಸಲಿನಲ್ಲಿ, ಅಲೇಕ್ಷ್ಯನಿಗೂ ಇವಳು ತನ್ನ ಹಿಂದೆ ಬಿದ್ದಿದ್ದಾಳೆಂಬ ವಿಚಾರ ತಿಳಿಬರಲಿಲ್ಲ. ಹಾಗೇನಾದರೂ ಆಗಿದ್ದಲ್ಲಿ, ನಮ್ಮ ನಡುವಿನ ಸಂಪರ್ಕವೇ ತಪ್ಪಿಹೋಗುತ್ತಿತ್ತು! ಯಾವ ಹೊತ್ತಿನಲ್ಲಿ, ಈ ಮಹಾರಾಯಿತಿ ಅಲೇಕ್ಷ್ಯನ ಮೇಲೆ ಕಣ್ಣು ಹಾಕಿದಳೋ, ನಮಗಂತೂ ತಿಳಿಬರಲಿಲ್ಲ. ಅದೊಂದು ಇನ್ಫ್ಯಾಚುಏಷನ್ನು... ಅಷ್ಟೆ. ಮೊದಲೆಲ್ಲ ಮಾತು ಮಾತಿಗೂ, ಅಲೇಕ್ಷ್ ಅಂಕಲ್... ಅಲೇಕ್ಷ್ ಅಂಕಲ್... ಅನ್ನುತ್ತಿದ್ದವಳು, ಒಮ್ಮೆಗೇ ಏನಾಯಿತೋ ಏನೋ, 'ಅಲಿ' ಎಂದು ಕೂಗಲಾರಂಭಿಸಿದ್ದಳು. 'ಯಾಕೇ ಅಂಕಲ್ ಅನ್ನುತಿಲ್ಲ...' ಎಂದು ಮಧುಕರಿಯೊಮ್ಮೆ ಕೇಳುವಾಗ, ಅಲೇಕ್ಷ್ಯನೇ 'ಇಟ್ಸೋಕೇ ಮಧು ಸರ್... ನನಗೂ ಹಾಗೆ ಕರೆಸಿಕೊಳ್ಳೋಕೆ ಸರಿ ಅನಿಸುಲ್ಲ...' ಅಂದಿದ್ದ. 'ಆದರೆ ನನಗೊಂದು ತಗಾದೆ ಇದ್ದೇ ಇದೆ... ಅಲೆಕ್ಸ್ ಅನ್ನೋದನ್ನ ಅಲೇಕ್ಷ್ಯ ಅಂತ ಮಾಡಿಕೊಂಡು, ಈಗ ಅಲಿ ಅಂತ ಕರೆಸಿಕೊಂಡು ಮುಸಲ್ಮಾನನಾಗೋದು ಯಾಕೋ ಸರಿ ಅನಿಸುತಿಲ್ಲ...' ಎಂದು ನಕ್ಕಿದ್ದ. ಹಾಗಂತ, ಇವಳೇನೂ ಅಲಿ ಅಂಬುದನ್ನು ನಿಲ್ಲಿಸಲಿಲ್ಲ. ಒಮ್ಮೆ ದೇಶಾಭಿರಾಮದ ನಡುವೆ, ಸಾವಕಾಶವಾಗಿ ವಿಚಾರಿಸಿಕೊಂಡಾಗ, 'ಐ ಕಾನ್ಟ್ ಲುಕ್ ಎಟ್ ಹಿಮ್ ಇನ್ನೆನ್ ಅಂಕಲ್ಸ್ ಮೌಲ್ಡ್...' ಅಂತಂದ ಐಕ್ಯಾ, ವಿಷಯವನ್ನು ಇನ್ನೊಂದೇ ಆಯಾಮಕ್ಕೇರಿಸಿಡುವುದೆ?! 'ಯ್ಯ್... ಏನೇ ಹಾಗಂದರೆ?' ನಾನು ಕನಲುವಾಗ, 'ಈಸೀ ಮಾಮ್... ಈಸಿ! ಇಟ್ಸ್ ಜಸ್ಟ್ ದಟ್ ಐ ಹ್ಯಾವ್ ಫಾಲನ್ ಫಾರ್ ಹಿಮ್!!' ಅಂದುಬಿಟ್ಟಳು. ಆಕಾಶದ ಛಾವಣಿಯೇ ಎದೆಗೊದ್ದು ಎದುರುಬಿದ್ದಂತಾಯಿತು! 'ತುಂಬಾ ದಿವಸದಿಂದ ಮನಸಿನಲ್ಲಿರೋದನ್ನ ಹೇಳಿದೆ ಅಷ್ಟೇ, ಮಾಮ್... ಹೇಗಿದ್ದರೂ ನನಗೆ ಮದುವೆ ಮಾಡೋ ಯೋಚನೆಯಲ್ಲಿದೀರಿ... ಹೀ ಟೂ ಈಸ್ ಎಲಿಜಿಬಲ್... ಕೇಳಿ ನೋಡಿ... ಐ ಡೋಂಟ್ ಮೈಂಡ್ ಸೆಟಲಿಂಗ್ ಡೌನ್ ವಿತ್ ಹಿಮ್...' ಅಂದಿದ್ದಳು! ಈ ಮಾತನ್ನು ನಾನು ಬೇಕೆಂದೇ ಮಧುಕರಿಯವರೆಗೂ ಕೊಂಡೊಯ್ಯಲಿಲ್ಲ. ಒಂದು, ನೊಂದುಕೊಂಡಾನೆಂದು; ಎರಡು, ಅಕಸ್ಮಾತ್ ಅವನೂ ಯೆಸ್ಸೆಂದು 'ಇನ್ನೊಂದೇ' ಆಗಿಬಿಡಬಹುದೆಂದು! ನಾನಂತೂ ಐಕ್ಯಾಳ ಮಾತನ್ನು ಅಲ್ಲಗಳೆಯುವ ಪರಿಸ್ಥಿತಿಯಲ್ಲಿಯೇ ಇರಲಿಲ್ಲ. ಹುಡುಗಾಟದ ಮಾತೆಂದು ಸುಮ್ಮನಿರುವಂತೆಯೂ ಇರಲಿಲ್ಲ. ಸುದೈವವಶಾತ್, ಅಲೇಕ್ಷ್ಯ ಅವೇ ದಿನಗಳಲ್ಲಿ ಯಾವುದೋ ಕೆಲಸದ ಮೇಲೆ, ಯೂಎಸ್ಸಿಗೆ ಹೋದ. ಅವನು ತನ್ನಿಂದ ದೂರಯಿಸುತ್ತಿದ್ದಾನೆಂದು, ಐಕ್ಯಾ, ನಿಜಕ್ಕೂ ಪರಿತಪಿಸಿದ್ದಳು. ಅದೇನು ಮಹಿಮೆಯೋ ಏನೋ, ಅಥವಾ ನಾನಂದುಕೊಂಡಿದ್ದಂತೆ ಸುಮ್ಮನೆ ಇನ್ಫ್ಯಾಚುಏಶನೇ ಆಗಿತ್ತೇನೋ... ಮುಂದಿನ ಎರಡು ತಿಂಗಳಲ್ಲಿ ಸುಧಾರಿಸಿದಳು. ಸುಧಾರಿಸಿದಳೆಲ್ಲಿ, ಠೀಕು ನಾಲ್ಕನೆಯ ತಿಂಗಳಿಗೆಲ್ಲ, ಇಂಟರ್‌ನೆಟ್‌ನಲ್ಲೆಲ್ಲೋ ಸಿಕ್ಕನೆಂದು – ಈ ಅನಿರುತಂ ಎಂಬ ಹೊಸ ಪರಿಚಯವನ್ನೆತ್ತರಿಸಿ ತಂದು ಎದುರು ನಿಲ್ಲಿಸಿದ್ದಳು. ನನಗೋ, ನಿಜ